ಜೆಎಸ್‌ಎಸ್ ಮಹಾವಿದ್ಯಾಪೀಠ

# ಜೆಎಸ್‌ಎಸ್ ಮಹಿಳಾ ಕಾಲೇಜು

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜಿತ ಮತ್ತು ನ್ಯಾಕ್ ನಿಂದ 'ಬಿ' ಮಾನ್ಯತೆ ಪಡೆದಿದೆ

**ಕೊಳ್ಳೇಗಾಲ – 571 440, ಚಾಮರಾಜನಗರ ಜಿಲ್ಲೆ**

☎: 08224–252149    🖷: 08224–256051    Email: jsscwk@gmail.com    www.jsscwkgl.org

## ಪ್ರಕಟಣೆಯ ಕೃಪೆಗಾಗಿ

**ಕೌಶಲ್ಯಯುತ ವಿದ್ಯಾರ್ಥಿಗಳಿಗೆ ಮಾತ್ರ ಭವಿಷ್ಯವಿದೆ–ಶ್ರೀ ಇಮ್ಯಾನುಯಲ್**

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳು ಮತ್ತು ಉದ್ಯೋಗ ಮಾಹಿತಿ ಕುರಿತ ತರಬೇತಿ ಶಿಬಿರ**

ಕೊಳ್ಳೇಗಾಲ: 13.3.2019 ದೇಶದಲ್ಲಿ ಪ್ರತೀ ವರ್ಷ ಲಕ್ಷಾಂತರ ವಿದ್ಯಾರ್ಥಿಗಳು ಪದವಿ ಪಡೆದು ಹೊರಬರುತ್ತಾರೆ. ಆದರೆ ಕೌಶಲ ಇದ್ದವರಿಗೆ ಮಾತ್ರ ಉತ್ತಮ ಭವಿಷ್ಯ ಇರುತ್ತದೆ ಎಂದು ಶ್ರೀ ಇಮ್ಯಾನುಯಲ್, ಕೌಶಲ ತರಬೇತಿದಾರರು, ಮೈಸೂರು ರವರು ತಿಳಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಕಾಮರ್ಸ್ ಕ್ಲಬ್ ವತಿಯಿಂದ ಮೈಸೂರು ವಿಶ್ವ ವಿದ್ಯಾನಿಲಯದ ಉದ್ಯೋಗ ಮತ್ತು ಮಾಹಿತಿ ಕೇಂದ್ರದ ಆಶ್ರದಲ್ಲಿ ಆಯೋಜಿಸಿದ್ದ " ಕೌಶಲ್ಯತೆ ಮತ್ತು ಉದ್ಯೋಗ ಅವಕಾಶಗಳು" ಎಂಬ ವಿಷಯದ ಮೇಲಿನ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಸ್ಪರ್ಧಾ ಕಾರ್ಯಕ್ರಮಗಳಲ್ಲಿ ಹಾಗೂ ಸ್ಪರ್ಧಾ ಪರೀಕ್ಷೆಗಳಲ್ಲಿ ಭಾಗವಹಿಸುವುದನ್ನು ರೂಢಿಸಿಕೊಳ್ಳಬೇಕು. ಅದಕ್ಕಾಗಿ ನಿರಂತರಾಗಿ ಕಠಿಣ ಪರಿಶ್ರಮ ಹಾಕುವುದರ ಮೂಲಕ ಸಿದ್ಧತೆ ನಡೆಸಿಕೊಂಡಾಗ ಯಶಸ್ಸು ಸುಲಭಸಾಧ್ಯ. ಪರಿಶ್ರಮದ ಜೊತೆಗೆ ಸಕಾರಾತ್ಮಕ ಚಿಂತನೆ ಬೆಳಸಿಕೊಳ್ಳಬೇಕು. ಆರಂಭಿಕ ಸೋಲುಗಳನ್ನು ಗೆಲುವಿನ ಮೆಟ್ಟಲುಗಳನ್ನಾಗಿ ಪರಿವರ್ತಿಸಿಕೊಳ್ಳಬೇಕೆಂದು ತಿಳಿಸುತ್ತ ಕೌಶಲದ ಮಹತ್ವ ಹಾಗೂ ಕಲಿಯುವುದರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು .

ಅಧ್ಯಕ್ಷತೆ ವಹಿಸಿ ಪ್ರಾಚಾರ್ಯ ಪ್ರೊ.ಉಮೇಶ ಯಶಸ್ಸು ಯಾರದೇ ಆಸ್ತಿಯಾಗಿರುವುದಿಲ್ಲ. ಅದು ಏಕಾಗ್ರತೆ ಹಾಗೂ ಬದ್ಧತೆ ಇದ್ದವರಿಗೆ ಮಾತ್ರ ಲಭಿಸುತ್ತದೆ. ಆರಂಭಿಕ ಸೋಲಿಗೆ ಎದೆಗುಂದದೆ, ಮರು ಪ್ರಯತ್ನ ನಿಲ್ಲಿಸದೇ, ಆತ್ಮ ವಿಶ್ವಾಸದಿಂದ ಗೆಲವು ಪಡೆಯುವ ಮನೋಪ್ರವೃತ್ತಿ ಹೊಂದಬೇಕು. ಜಪಾನ್ ಮತ್ತು ಚೀನಾ ದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಕೌಶಲ್ಯಯುಕ್ತ ಶಿಕ್ಷಣ ಮತ್ತು ವಿದ್ಯಾರ್ಥಿಗಳ ಅಭಿರುಚಿಗೆ ತಕ್ಕಂತೆ ತರಬೇತಿ ನೀಡುತ್ತಿರುವುದರಿಂದ ಎರಡೂ ದೇಶಗಳು ಅಭಿವೃದ್ಧಿಯತ್ತ ಸಾಗುತ್ತಿವೆ ಪರೀಕ್ಷೆಗಳಿಂದಲ್ಲದೆ ಗುಣಾತ್ಮಕ ಯೋಜನೆಗಳಿಂದ ಉತ್ತಮ ಬದುಕಿಗೆ ಮಾರ್ಗ ಎಂಬುದನ್ನು ಅರಿಯಬೇಕು ಎಂದು ತಿಳಿದರು.

ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥೆ ಪ್ರೊ.ಮಮತ, ಪ್ರೊ.ಆರ್ ಪಿ ಸೌಮ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾಮರ್ಸ್ ಕ್ಲಬ್ ವತಿಯಿಂದ ಮೈಸೂರು ವಿಶ್ವ ವಿದ್ಯಾನಿಲಯದ ಉದ್ಯೋಗ ಮತ್ತು ಮಾಹಿತಿ ಕೇಂದ್ರದ ಆಶ್ರದಲ್ಲಿ ಆಯೋಜಿಸಿದ್ದ "ಕೌಶಲ್ಯತೆ ಮತ್ತು ಉದ್ಯೋಗ ಅವಕಾಶಗಳು" ಎಂಬ ವಿಷಯದ ಮೇಲೆ ಶಿಬಿರ ಕಾರ್ಯಕ್ರಮ.




ಕಾಮರ್ಸ್ ಕ್ಲಬ್ ವತಿಯಿಂದ ಮೈಸೂರು ವಿಶ್ವ ವಿದ್ಯಾನಿಲಯದ ಉದ್ಯೋಗ ಮತ್ತು ಮಾಹಿತಿ ಕೇಂದ್ರದ ಆಶ್ರದಲ್ಲಿ ಆಯೋಜಿಸಿದ್ದ "ಕೌಶಲ್ಯತೆ ಮತ್ತು ಉದ್ಯೋಗ ಅವಕಾಶಗಳು" ಎಂಬ ವಿಷಯದ ಮೇಲೆ ಶ್ರೀ ಇಮ್ಯಾನುಯಲ್ ರವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತಿರುವುದು.



ಕಾಮರ್ಸ್ ಕ್ಲಬ್ ವತಿಯಿಂದ ಮೈಸೂರು ವಿಶ್ವ ವಿದ್ಯಾನಿಲಯದ ಉದ್ಯೋಗ ಮತ್ತು ಮಾಹಿತಿ ಕೇಂದ್ರದ ಆಶ್ರದಲ್ಲಿ ಆಯೋಜಿಸಿದ್ದ "ಕೌಶಲ್ಯತೆ ಮತ್ತು ಉದ್ಯೋಗ ಅವಕಾಶಗಳು" ಎಂಬ ವಿಷಯದ ಮೇಲೆ ಶ್ರೀ ಇಮ್ಯಾನುಯಲ್ ರವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡುತ್ತಿರುವುದು.

